ಕೆ.ಪಿ. ರಾಮಗುಂಡಿ, ಬೈಲಹೊಂಗಲ

ನಾವು ಎಷ್ಟೇ ಬೆಳ್ಳಗಿದ್ದರೂ ನಮ್ಮ ನೆರಳು ಕಪ್ಪು ಏಕೆ ಸ್ವಾಮಿ?



ಬಿದ್ದ ಬೆಳಕನ್ನು ಗಾಜಿನಂತೆ ಮುಂತಳ್ಳದೆ ಹೀರಿಬಿಡುವಿರಲ್ಲ!

ಮೋಹನ್ ಎಸ್, ಬೆಂಗಳೂರು

ಆಕ್ಸಿಜನ್ ಹಾಗೂ 'ಆಕ್ಷಿಜನ' ಎರಡಕ್ಕೂ ಇರುವ ಪ್ರಾಮುಖ್ಯತೆ ಏನು?

ಆಕ್ಸಿಜನ್‌ನಿಂದ 'ಮುಂದುವರಿ'; 'ಆಕ್ಷಿಜನ'ರಿಂದ 'ಮುಂದು worry'.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ಅಪ್ಪ ಅಮ್ಮನನ್ನು ಚೆನ್ನಾಗಿ ನೋಡಿಕೊಳ್ಳುವ ಮಗನೇ ಅವರಿಂದ ಕಿರಿಕಿರಿ ಪಡುವಂತಾದರೆ ಏನು ಹೇಳಬೇಕು?

ಸಲಿಗೆ ಇದ್ದಲ್ಲೇ ಸಿಟ್ಟು ಹೆಚ್ಚೆಂದು ಅರಿತುಕೊಳ್ಳಬೇಕು.

ಎ. ರಮೇಶ್, ಬೆಂಗಳೂರು

ರುದ್ರವೀಣೆಗೂ, ಮಹಿಳಾಮಣಿಗೂ ಏನಾದರೂ ಸಾಮ್ಯವಿರಬಹುದಾ?



ಹೂಂ. ಸರಿಯಾದ ಟ್ಯೂನ್ ಹಿಡಿದರೆ ಬೇಕಾದ ರೀತಿಯಲ್ಲಿ ನುಡಿಸಬಹುದು.

ಬಿ.ಆರ್. ಉಷಾ, ಬೆಂಗಳೂರು

ಇನ್ನು ಮುಂದೆ ಪ್ರಶ್ನೆ ಕೇಳಲೋ ಬೇಡವೋ?

ಪ್ರಶ್ನೆ ಕೇಳುವವರೇ ಈ ಅಂಕಣಕ್ಕೆ ಬೆಳಕು ನೀಡುವ ಉಷೆ.

ಅನಸೂಯ ಟಿ., ಕೇದಿಗೆಮನೆ

ಅತಿ ಹೆಚ್ಚು ಫೀಸು ಕಟ್ಟಿಸಿಕೊಳ್ಳುವ ಶಾಲೆಯೇ ಅತ್ಯುತ್ತಮ ಶಾಲೆಯೆನ್ನುವ ನಂಬಿಕೆಗೆ ಕೊನೆ ಎಂದು?

ಬಡ ಏಕಲವ್ಯನ 'ಸ್ವಯಂಶಾಲೆ' ದ್ರೋಣರ 'ರಾಜಶಾಲೆ'ಗಿಂತ ಉತ್ತಮವಿತ್ತೆಂದು ತಿಳಿದಂದು.

ಪಿ. ಜಯವಂತ ಪೈ, ಕುಂದಾಪುರ

ಲಾಠಿಗೂ, ಲಟ್ಟಣಿಗೆಗೂ ವ್ಯತ್ಯಾಸವೇನು?

ಲಾಠಿ 'ಚರ್ಮ ವಾದ್ಯ'; ಲಟ್ಟಣಿಗೆಯದು ಸೂಪರ್ ಹಿಟ್ ಮುಕಾಬಲಾ.

ಫಾಲನೇತ್ರ ಸಜ್ಜನ, ಸಿರಸಿ

ಮುಖದ ಮೇಲೆ ನೀರಿಳಿಸುತ್ತೇನೆ ಎಂದು ಬೆವರಿಳಿಸುತ್ತಾರಲ್ಲಾ...?

ಅವರ ತಪ್ಪಲ್ಲ. ಉಪ್ಪು ಖಾರ ತಿಂದ ದೇಹ ಖಾರದ ಮಾತನ್ನು ಕೇಳಿದಾಗ ಉಪ್ಪುನೀರನ್ನು ಹೊರಬಿಡುತ್ತದೆ.

ಪಿ.ಜೆ. ರಾಘವೇಂದ್ರ, ಮೈಸೂರು

ಪುಢಾರಿಗಳು ಸಿಕ್ಕಿಹಾಕಿಕೊಂಡ ತಕ್ಷಣ ಇದು ಷಡ್ಯಂತ್ರ ಎನ್ನುವುದೇಕೆ?

ಸೀಟು, ರೇಟು, ನೋಟು, ವೋಟು, ಲಾಬಿ, ಹಾಬಿ ಈ ಷಟ್ ಕಾರಣಗಳಿನ್ನೆಲು.

ವಿ. ಹೇಮಂತಕುಮಾರ್, ಬೆಂಗಳೂರು

ಈ ಸಾರಿ ಯುಗಾದಿಗೆ ಹದಿನೆಂಟು ತುಂಬಿತು ಎಂದು ಎಚ್ಚರಿಸುತ್ತಿದ್ದಾಳಲ್ಲ ರಾಂಜಿ...?

ಓಹ್! ಇನ್ನು ಅಷ್ಟಾದಶ, ಕಷ್ಟಾದಶ ಪುರಾಣಗಳು ಶುರು. ಬೆಸ್ಟ್ ವಿಷಸ್.

ಗಂಜಾಂ ನಾಗರಾಜ್, ಮೈಸೂರು

ದೇವರು ಎಲ್ಲಾ ಕಡೆಯೂ ಇರುವುದಾದರೆ ದೆವ್ವಗಳು ಎಲ್ಲಿ ಇರುತ್ತವೆ?

ಅವೂ ಎಲ್ಲೆಡೆ ಇರುತ್ತವೆ. ದೇವ, ದೆವ್ವಗಳು ಒಂದೇ ನಾಣ್ಯದ ವಿರುದ್ಧ ಮುಖಗಳು.

ಸುನಾಭ, ಊರಿಲ್ಲ

ಅವಿವಾಹಿತ ಸನ್ಯಾಸಿಗಳೇ ಇತ್ತೀಚೆಗೆ ಮದುವೆಯ ಬಗ್ಗೆ ಬಹಳ ಮಾತನಾಡುತ್ತಿದ್ದಾರಲ್ಲಾ...?

ಕೃತಿಯಲ್ಲಿಲ್ಲದ್ದನ್ನು ನುಡಿಯಲ್ಲಾದರೂ ಆಡಿ ಸಂತಸ ಪಡುವ ಬಯಕೆಯಂತೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಹಬ್ಬ, ಹರಿದಿನಗಳಲ್ಲಿ ಬಾಯ್ತುಂಬ ಹರಸಿ, ಹಿಂದೆ ಹಿಡಿಶಾಪ ಹಾಕುವರದು ಸಂಸ್ಕೃತಿಯೋ, ವಿಕೃತಿಯೋ?

ಸಂಸ್ಕೃತಿಯೇ – ಮನುಜರದ್ದಲ್ಲ, ಊಸರವಳ್ಳಿಯದು.

## ಬಹುಮಾನಿತ ಪ್ರಶ್ನೆ

ಜಯಶ್ರೀ, ಬೆಂಗಳೂರು

ಪುರಾಣದ ಖಳನಾಯಕಿಯರು ನೋಡಲು ಕ್ರೂರ; ಸೀರಿಯಲ್ ಖಳನಾಯಕಿಯರು ಸುಂದರ. ಏಕೆ?

ಪುರಾಣಕಾಲದಲ್ಲಿ ಪಾರ್ಲರ್ ಇರಲಿಲ್ಲವಲ್ಲ.

ಅಶೋಕ್ ಆರ್. ಹಾಲಣ್ಣನವರ, ಲಕ್ಷ್ಮೇಶ್ವರ

ಬಹುಮಾನಕ್ಕೆ ಕಳಿಸಿದ ಪ್ರಶ್ನೆ ಏನಾಯಿತು ಸಾರ್?

ಕ್ವಾರಂಟೈನ್‌ನಲ್ಲಿದೆ. ಟೆಸ್ಟ್ ಮಾಡಿ ಪಾಸಿಟಿವ್ವೋ ಅಲ್ಲವೋ ತಿಳಿಸುವೆ.

ಸುಮನಾ, ತೆಲಂಗಾಣ

ಕೊರೊನಾ ಪ್ರಪಂಚದ ಕುರುಹನ್ನೇ ಅಳಿಸುವಂತಾದರೂ ರಾಜಕಾರಣಿಗಳ ಕುರ್ಚಿದಾಹ ತಣಿಯದಲ್ಲಾ...?

ಲಸಿಕೆ, ಹಾಸಿಗೆಗಳ ಕಿಕ್‌ಬ್ಯಾಕ್ ನಂಟು ದಾಹವನ್ನು ಮತ್ತಷ್ಟು ಹೆಚ್ಚಿಸಿದೆಯಂತೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಗಂಡಸರ ನಡುವಿನ ಜಗಳಕ್ಕಿಂತ ಹೆಂಗಸರ ನಡುವಿನ ಜಗಳವೇ ಹೆಚ್ಚು ಮಜಾ ಇರುತ್ತದೆಯಲ್ಲ?



ಜಗಳ ನೋಡುವುದರಲ್ಲಿ ಮಜಾ ಇರುತ್ತದೆಯೆ? ಓಹ್! ನೀವು ಟಿವಿ ಚಾನಲ್ಲವರೇ ಇರಬೇಕು.

ಆರ್. ಮಧುಸೂದನ್, ಹಾಸನ

ತೂಕ ಇಳಿಸಲು 5 ಕಿ.ಮಿ. ವಾಕ್ ಮಾಡುವ ಮಹಿಳೆಯರು ಹಿಂತಿರುಗುವಾಗ ತುಪ್ಪದ ದೋಸೆ ತಿನ್ನುವರಲ್ಲಾ...?

ಮರುದಿನದ 5 ಕಿ.ಮೀ. ವಾಕಿಗೆ ಅದೇ ಪ್ರೇರಣೆ.

ಮಂಜುನಾಥ್ ಜಿ., ಹಗರಿಬೊಮ್ಮನಹಳ್ಳಿ

ಭಿನ್ನಾಭಿಪ್ರಾಯಗಳನ್ನು ಸಹಿಸಿಕೊಳ್ಳುವುದು ಹೇಗೆ?

ವ್ಯಕ್ತಿಯನ್ನು ಸಹಿಸಿಕೊಂಡುಬಿಡಿ; ಭಿನ್ನಾಭಿಪ್ರಾಯ ತಂತಾನೇ ಸಹ್ಯವಾಗುತ್ತೆ.

■ ರಾಮ್

ಪ್ರಶ್ನೆಯನ್ನು ಕಳಿಸಲು: editorsu@sudha.co.in